ಪರಮದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಲ್ಲಿ

# ಫಜ್ರ್ ನಮಾಝ್ ಪ್ರಾಮುಖ್ಯತೆ ಮತ್ತು ಶ್ರೇಷ್ಠತೆ

## فضل الصلاة الفجر

ಪ್ರತಿಯೊಬ್ಬ ಸತ್ಯವಿಶ್ವಾಸಿಯೂ ಐದು ಹೊತ್ತಿನ ನಮಾಝುನ್ನು ಕ್ಲಪ್ತ ಸಮಯದಲ್ಲಿ ನಿರ್ವಹಿಸ ಬೇಕಾದುದು ಅವನ ಮೇಲಿರುವ ಕಡ್ಡಾಯ ಬಾಧ್ಯತೆಯಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ:

﴿إِنَّ الصَّلَاةَ كَانَتْ عَلَى الْمُؤْمِنِينَ كِتَابًا مَوْقُوتًا﴾

**"ಖಂಡಿತವಾಗಿಯೂ ನಮಾಝ್ ಸತ್ಯವಿಶ್ವಾಸಿಗಳ ಮೇಲೆ ಸಮಯ ನಿಶ್ಚಯಿಸಲಾದ ಒಂದು ಕಡ್ಡಾಯ ಕರ್ಮವಾಗಿದೆ."(ಅನ್ನಿಸಾಅ್: 103)**

ಆದುದರಿಂದ ಖಡ್ಡಾಯ ನಮಾಝಿನಲ್ಲೊಂದಾದ ಫಜ್ರ್ ನಮಾಝ್‌ನ ಶ್ರೇಷ್ಠತೆ ಮತ್ತು ಪ್ರಾಮುಖ್ಯತೆಯನ್ನು ನಾವು ತಿಳಿದಿರಬೇಕು. ಅವುಗಳನ್ನು ಈ ಕೆಳಗೆ ಕೊಡಲಾಗಿದೆ.

### 1. ಫಜ್ರ್ ನಮಾಝ್ ನಿರ್ವಹಿಸಿದರೆ ಅಲ್ಲಾಹನ ಸಂರಕ್ಷಣೆ

ಜುಂದುಬ್ ಇಬ್ನ್ ಅಬ್ದುಲ್ಲಾಹ್(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ನುಡಿದರು:

«مَنْ صَلَّى الصُّبْحَ فَهُوَ فِى ذِمَّةِ اللَّهِ فَلاَ يَطْلُبَنَّكُمُ اللَّهُ مِنْ ذِمَّتِهِ بِشَىْءٍ فَيُدْرِكَهُ فَيَكُبَّهُ فِى نَارِ جَهَنَّمَ»

"ಯಾರಾದರೂ ಫಜ್ರ್ ನಮಾಝ್ ನಿರ್ವಹಿಸಿದರೆ ಅವನು ಅಲ್ಲಾಹನ ಸಂರಕ್ಷಣೆಯಲ್ಲಿದ್ದಾನೆ. ಅಲ್ಲಾಹನು ಅವನ ಸಂರಕ್ಷಣೆಯಿಂದ ಏನನ್ನೂ ಕೇಳದಿರಲಿ.(ಫಜ್ರ್ ನಮಾಝ್ ನಿರ್ವಹಿಸಿದವನನ್ನು ಯಾರಾದರೂ ಉಪದ್ರವಿಸಿದರೆ ತನ್ನ ಸಂರಕ್ಷಣೆಯ ಅಧೀನದಲ್ಲಿರುವವನನ್ನು ಉಪದ್ರವಿಸಿರುವುದರಿಂದ ಅವನ ವಿರುದ್ಧ ಅಲ್ಲಾಹನು ಕ್ರಮ ಕೈಗೊಳ್ಳುವನು). ಹಾಗಾದರೆ ಅವನನ್ನು ಹಿಡಿದು ನರಕಾಗ್ನಿಗೆ ಎಸೆಯಲಾಗುವುದು"(ಮುಸ್ಲಿಂ)

### 2. ಫಜ್ರ್ ನಮಾಝ್ ನಿರ್ವಹಿಸಿದವರಿಗೆ ಸ್ವರ್ಗ

ಅಬೂ ಮೂಸ ಅಲ್‌ಅಶ್‌ಅರೀ(ﷺ)ರವರಿಂದ ವರದಿ:ಖಂಡಿತವಾಗಿಯೂ ಅಲ್ಲಾಹನ ರಸೂಲ್(ﷺ)ರವರು ನುಡಿದರು:

«مَنْ صَلَّى الْبَرْدَيْنِ ، دَخَلَ الْجَنَّةَ»

"ಯಾರಾದರೂ ಫಜ್ರ್ ಮತ್ತು ಅಸ್ವರ್ ನಮಾಝ್ ನಿರ್ವಹಿಸಿದರೆ ಅವನು ಸ್ವರ್ಗದಲ್ಲಿ ಪ್ರವೇಶಿಸಿದನು"(ಬುಖಾರಿ)

### 3. ಫಜ್ರ್ ನಮಾಝ್ ನಿರ್ವಹಿಸಿದವನು ರಾತ್ರಿ ಪೂರ್ಣವಾಗಿ ನಮಾಝ್ ನಿರ್ವಹಿಸಿದವನಿಗೆ ಸಮಾನ

«مَنْ صَلَّى الْعِشَاءَ فِى جَمَاعَةٍ فَكَأَنَّمَا قَامَ نِصْفَ اللَّيْلِ وَمَنْ صَلَّى الصُّبْحَ فِى جَمَاعَةٍ فَكَأَنَّمَا صَلَّى اللَّيْلَ كُلَّهُ»

ಪ್ರವಾದಿ(ﷺ)ರವರು ನುಡಿದರು: "ಯಾರಾದರೂ ಇಶಾ ನಮಾಝುನ್ನು ಜಮಾಅತಿನೊಂದಿಗೆ ನಿರ್ವಹಿಸಿದರೆ ಅವನು ರಾತ್ರಿಯ ಅರ್ಧ ಭಾಗ ನಮಾಝ್ ನಿರ್ವಹಿಸಿರುವುದಕ್ಕೆ ಸಮಾನ. ಯಾರಾದರೂ ಫಜ್ರ್ ನಮಾಝುನ್ನು ಜಮಾಅತಿನೊಂದಿಗೆ ನಿರ್ವಹಿಸಿದರೆ ಅವನು ರಾತ್ರಿ ಪೂರ್ಣವಾಗಿ ನಮಾಝ್ ನಿರ್ವಹಿಸಿರುವುದಕ್ಕೆ ಸಮಾನ."(ಮುಸ್ಲಿಂ)

### 4. ಫಜ್ರ್ ನಮಾಝ್ ನಿರ್ವಹಿಸಿದವನು ನರಕದಲ್ಲಿ ಪ್ರವೇಶಿಸಲಾರ

ಪ್ರವಾದಿ(ﷺ)ರವರು ನುಡಿದರು: «لَنْ يَلِجَ النَّارَ أَحَدٌ صَلَّى قَبْلَ طُلُوعِ الشَّمْسِ وَقَبْلَ غُرُوبِهَا. يَعْنِى الْفَجْرَ وَالْعَصْرَ»

"ಸೂರ್ಯೋದಯದ ಮತ್ತು ಸೂರ್ಯಾಸ್ತಮಾನದ ಮುಂಚೆ ಅಂದರೆ ಫಜ್ರ್ ಮತ್ತು ಅಸ್ವರ್ ನಮಾಝ್ ನಿರ್ವಹಿಸಿದಾತನು ನರಕದಲ್ಲಿ ಪ್ರವೇಶಿಸಲಾರನು"(ಮುಸ್ಲಿಂ)

## 5. ಅಲ್ಲಾಹನನ್ನು ದರ್ಶಿಸಲು

ಜಾಬಿರ್(ﷺ)ರವರು ವರದಿ ಮಾಡುತ್ತಾರೆ: ನಾವೊಮ್ಮೆ ಪ್ರವಾದಿ(ﷺ)ರವರ ಜೊತೆಯಲ್ಲಿದ್ದೆವು. ಆಗ ಪೂರ್ಣ ಚಂದ್ರನನ್ನು ನೋಡಿ ಪ್ರವಾದಿ(ﷺ)ರವರು ಹೇಳಿದರು:

«إِنَّكُمْ سَتَرَوْنَ رَبَّكُمْ كَمَا تَرَوْنَ هَذَا الْقَمَرَ لاَ تُضَامُّونَ فِي رُؤْيَتِهِ فَإِنِ اسْتَطَعْتُمْ أَنْ لاَ تُغْلَبُوا عَلَى صَلاَةٍ قَبْلَ طُلُوعِ الشَّمْسِ وَقَبْلَ غُرُوبِهَا فَافْعَلُوا ثُمَّ قَرَأَ» ﴿وَسَبِّحْ بِحَمْدِ رَبِّكَ قَبْلَ طُلُوعِ الشَّمْسِ وَقَبْلَ الْغُرُوبِ﴾

"ಖಂಡಿತವಾಗಿಯೂ ನೀವು ಪರದೆಯಿಲ್ಲದೆ ಈ ಪೂರ್ಣ ಚಂದ್ರನನ್ನು ದರ್ಶಿಸುವಂತೆ ನೀವು ನಿಮ್ಮ ಪ್ರಭುವನ್ನು ಕಾಣುವಿರಿ. ನಿಮಗೆ ಸಾಧ್ಯವಾಗುವುದಾದರೆ ಸೂರ್ಯೋದಯದ ಮತ್ತು ಸೂರ್ಯಾಸ್ತಮಾನದ ಮುಂಚಿನ ನಮಾಝ್‌ಗಳು ನಿಮ್ಮನ್ನು ಪರಾಜಿತ ಗೊಳಿಸದಿರಲಿ. (ಅರ್ಥಾತ್: ಅವುಗಳನ್ನು ನಿಶ್ಚಯಿಸಲ್ಪಟ್ಟ ಸಮಯದಲ್ಲಿ ನಿರ್ವಹಿಸುವುದರಲ್ಲಿ ನಿಮಗೆ ಯಾವುದೇ ಲೋಪದೋಷ ಉಂಟಾಗ ಕೂಡದು). ಆ ಬಳಿಕ ಪ್ರವಾದಿ(ﷺ)ರವರು ಈ ಸೂಕ್ತಿಯನ್ನು ಪಾರಾಯಣ ಮಾಡಿದರು: **"ಸೂರ್ಯೋದಯಕ್ಕೆ ಮುಂಚೆ ಮತ್ತು ಸೂರ್ಯಾಸ್ತಮಾನಕ್ಕೆ ಮುಂಚೆ ತಮ್ಮ ಪ್ರಭುವಿನ ಸ್ತುತಿಯೊಂದಿಗೆ (ಅವನ) ಪರಿಪಾವನತೆಯನ್ನು ಕೊಂಡಾಡಿರಿ."**(ಸೂರಃ ಖಾಫ್:39)–(ಮುಸ್ಲಿಂ)

## 6. ಮಲಕುಗಳು ಸಾಕ್ಷಿಗಳಾಗುವ ನಮಾಝ್

ಅಬೂ ಹುರೈರಃ(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ಹೇಳುವುದನ್ನು ನಾನು ಆಲಿಸಿದೆನು:

«تَفْضُلُ صَلاَةُ الْجَمِيعِ صَلاَةَ أَحَدِكُمْ وَحْدَهُ بِخَمْسٍ وَعِشْرِينَ جُزْءًا وَتَجْتَمِعُ مَلاَئِكَةُ اللَّيْلِ وَمَلاَئِكَةُ النَّهَارِ فِي صَلاَةِ الْفَجْرِ ثُمَّ يَقُولُ أَبُو هُرَيْرَةَ فَاقْرَؤُوا إِنْ شِئْتُمْ» ﴿إِنَّ قُرْآنَ الْفَجْرِ كَانَ مَشْهُودًا﴾

"ಸಾಮೂಹಿಕ(ಜಮಾಅತ್) ನಮಾಝ್, ನಿಮ್ಮಲ್ಲೊಬ್ಬರು ಒಂಟಿಯಾಗಿ ನಿರ್ವಹಿಸುವ ನಮಾಝಿಗಿಂತ ಇಪ್ಪತ್ತೈದು ಪಟ್ಟು ಹೆಚ್ಚು ಶ್ರೇಷ್ಠವಾಗಿದೆ. ಫಜ್ರ್ ನಮಾಝಿಗೆ ರಾತ್ರಿಯ ಮತ್ತು ಹಗಲಿನ ಮಲಕುಗಳು ಒಟ್ಟು ಸೇರುತ್ತಾರೆ. ನಂತರ ಅಬೂಹುರೈರಃ(ﷺ) ಅದಕ್ಕೆ (ಆಧಾರವಾಗಿ) ನೀವು ಉದ್ದೇಶಿಸುವುದಾದರೆ ಈ ಸೂಕ್ತಿಯನ್ನು ಪಾರಾಯಣ ಮಾಡಿರಿ ಎಂದರು. **"ಖಂಡಿತವಾಗಿಯೂ ಪ್ರಭಾತ ನಮಾಝ್‌ನ ಕುರ್‌ಆನ್ ಪಾರಾಯಣವು ಸಾಕ್ಷ್ಯವಹಿಸಲ್ಪಡುತ್ತದೆ."** (ಅಲ್ ಇಸ್ರಾಅ್: 78)–(ಬುಖಾರಿ)

## 7. ಫಜ್ರ್ ನಮಾಝ್‌ನ ನಂತರ

ಅನಸ್(ﷺ)ರವರಿಂದ ವರದಿ: ಅಲ್ಲಾಹನ ರಸೂಲ್(ﷺ)ರವರು ಹೇಳಿದರು:

«مَنْ صَلَّى الْغَدَاةَ فِى جَمَاعَةٍ ثُمَّ قَعَدَ يَذْكُرُ اللَّهَ حَتَّى تَطْلُعَ الشَّمْسُ ثُمَّ صَلَّى رَكْعَتَيْنِ كَانَتْ لَهُ كَأَجْرِ حَجَّةٍ وَعُمْرَةٍ. قَالَ قَالَ رَسُولُ اللَّهِ – صلى الله عليه وسلم– تَامَّةٍ تَامَّةٍ تَامَّةٍ»

"ಯಾರಾದರೂ ಫಜ್ರ್ ನಮಾಝನ್ನು ಜಮಾಅತಿನೊಂದಿಗೆ ನಿರ್ವಹಿಸಿ, ಅದರ ಬಳಿಕ ಸೂರ್ಯೋದಯದ ವರೆಗೆ (ಅಲ್ಲೇ) ಕುಳಿತು ಅಲ್ಲಾಹನನ್ನು ಸ್ಮರಿಸುತ್ತಾ, ನಂತರ ಎರಡು ರಕಅತ್ ನಮಾಝ್ ನಿರ್ವಹಿಸಿದರೆ ಆತನಿಗೆ ಒಂದು ಹಜ್ಜ್ ಮತ್ತು ಉಮ್ರಾದ ಪ್ರತಿಫಲವಿದೆ. ಅನಸ್(ﷺ) ಹೇಳುತ್ತಾರೆ: ಪರಿಪೂರ್ಣವಾದ ಪ್ರತಿಫಲವಿದೆಯೆಂದು ಪ್ರವಾದಿ(ﷺ)ರವರು ಮೂರು ಬಾರಿ ಪುನರಾವರ್ತಿಸಿ ಹೇಳಿದರು"(ತಿರ್ಮಿದಿ). (ಈ ಹದೀಸ್ ಹಸನಾದ ಹದೀಸ್ ಎಂದು ಅಲ್ಬಾನಿ(ﷺ)ಅಭಿಪ್ರಾಯ ಪಟ್ಟಿದ್ದಾರೆ.)

## 8. ಫಜ್ರ್‌ನ ಮುಂಚೆ ನಿರ್ವಹಿಸಬೇಕಾದ ಎರಡು ರಕಅತ್ ಸುನ್ನತಿನ ಶ್ರೇಷ್ಠತೆ

ಆಇಶಾ(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: «رَكْعَتَا الْفَجْرِ خَيْرٌ مِنَ الدُّنْيَا وَمَا فِيهَا»

"ಫಜ್ರ್‌ನ (ಮುಂಚಿನ) ಎರಡು ರಕಅತ್, ಇಹ ಲೋಕ ಮತ್ತು ಅದರಲ್ಲಿರುವವುಗಳಿಗಿಂತ ಉತ್ತಮವಾಗಿದೆ"(ಮುಸ್ಲಿಂ)

ಪ್ರವಾದಿ(ﷺ)ರವರು ಫಜ್ರ್ ನಮಾಝಿನ ಪ್ರಾಮುಖ್ಯತೆಯನ್ನು ತಿಳಿಸಿದಂತೆ ಅದನ್ನು ಉಪೇಕ್ಷಿಸಿದರೆ ಉಂಟಾಗುವ ಭಯಾನಕತೆಯ ಕುರಿತೂ ಮುನ್ನೆಚ್ಚರಿಕೆ ನೀಡಿದ್ದಾರೆ. ಅದು ಫಜ್ರ್ ನಮಾಝಿಗಿರುವ ಪ್ರಧಾನ್ಯತೆಯನ್ನು ಎತ್ತಿ ತೋರಿಸಿತ್ತವೆ. ಅವುಗಳಲ್ಲಿ ಕೆಲವು:

## ಜಮಾಅತನ್ನು ಉಪೇಕ್ಷಿಸುವವರು ಕಪಟವಿಶ್ವಾಸಿಗಳು

ಅಬೂ ಹುರೈರ(ؓ)ರವರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು:

«إِنَّ أَثْقَلَ الصَّلاَةِ عَلَى الْمُنَافِقِينَ صَلاَةُ الْعِشَاءِ وَصَلاَةُ الْفَجْرِ وَلَوْ يَعْلَمُونَ مَا فِيهِمَا لأَتَوْهُمَا وَلَوْ حَبْوًا»

"ಕಪಟವಿಶ್ವಾಸಿಗಳಿಗೆ ಅತೀ ಭಾರವಾಗುವ(ಪ್ರಯಾಸವುಂಟಾಗುವ) ನಮಾಝ್ ಇಶಾ ಮತ್ತು ಫಜ್ರ್ ಆಗಿವೆ. ಅವೆರಡರಲ್ಲಿ ಇರುವ(ಪ್ರತಿಫಲ)ವನ್ನು ಅವರು ಅರಿತಿರುತ್ತಿದ್ದರೆ ತೆವಳುತ್ತಾಲಾದರೂ ಅವೆರಡನ್ನು ನಿರ್ವಹಿಸಲಿಕ್ಕಾಗಿ ಬರುತ್ತಿದ್ದರು."(ಇಬ್ನ್ ಮಾಜ, ಈ ಹದೀಸ್ ಸ್ವಹೀಹ್ ಎಂದು ಅಲ್ಬಾನಿ(ರಹ್) ಅಭಿಪ್ರಾಯ ಪಟ್ಟಿದ್ದಾರೆ)

ಅಬ್ದುಲ್ಲಾಹ್(ؓ)ರವರಿಂದ ವರದಿ: ಅವರು ಹೇಳುತ್ತಾರೆ. ಫಜ್ರ್ ನಮಾಝ್ ನಿರ್ವಹಿಸಲು ಎದ್ದೇಳದೆ ನಿದ್ರೆ ಮಾಡಿದ ಒಬ್ಬರ ಬಗ್ಗೆ ಪ್ರವಾದಿ(ﷺ)ರವರು ಹೇಳಿದರು:

«ذَاكَ رَجُلٌ بَالَ الشَّيْطَانُ فِي أُذُنَيْهِ»

"ಆ ವ್ಯಕ್ತಿಯ ಕಿವಿಗೆ ಶೈತಾನನು ಮೂತ್ರ ವಿಸರ್ಜನೆ ಮಾಡಿದ್ದಾನೆ."(ಬುಖಾರಿ)

ಅಲ್ಲಾಹನು ನಮಗೆಲ್ಲರೂ ಕ್ಲಪ್ತ ಸಮಯದಲ್ಲಿ ಐದು ಹೊತ್ತಿನ ನಮಾಝುನ್ನು ನಿರ್ವಹಿಸಲು ತೌಫೀಖ್ ನೀಡಿ ಅನುಗ್ರಹಿಸಲಿ. ಆಮೀನ್.

ಸಂಗ್ರಹ: ಅಬೂ ಬಿಲಾಲ್ ಎಸ್.ಎಮ್

وصلى الله وسلم على نبينا محمد وعلى آله وصحبه أجمعين


ಪ್ರಕಟಣೆ:
ಕರ್ನಾಟಕ ಸಲಫಿ ಅಸೋಸಿಯೇಷನ್ ದಮ್ಮಾಮ್–ಖೋಬರ್ ಘಟಕ



**ಪವಿತ್ರ ಸಂದೇಶ ಪಾಕ್ಷಿಕ, ಸತ್ಯ ಸಾರಥಿ ಮಾಸಿಕ, ಪುಸ್ತಕ, ಸಿ.ಡಿ/ಡಿ.ವಿ.ಡಿಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ:**

Cont: 03 8980984, 0567388901, 0506739851
Email: info@salafiksa.org, web: www.salafiksa.org

**K S A ISLAMIC MADRASA**
**DAMMAM & KHOBAR**

Dammam Timing: Wednesday: 8am – 1:00pm
Thursday : 5pm – 8:00pm
Khobar Timing: Tuesday : 5pm – 7:30pm
Thursday : 2pm – 7:00pm